ಅಧ್ಯಯನಕ್ಕೆ ಒಂದು ಶತಮಾನದ ಇತಿಹಾಸ ಮಾತ್ರ ಇದೆ. ಅದರಲ್ಲೂ 50–60 ವರ್ಷಗಳ ಕಾಲ ಬರಿಯ ಸಂಗ್ರಹಕಾರ್ಯವೇ ಆಯಿತು. ಅದನ್ನು ಭಾವುಕವಾಗಿ ನೋಡುವುದು, ಹಾಡುವುದೇ ಆಯಿತು. ಇದೀಗ ಐವತ್ತು ವರ್ಷಗಳಲ್ಲಿ ಜಾನಪದದ ಬೇರೆ ಬೇರೆಯ ಆಯಾಮಗಳನ್ನೂ ವಿದ್ವಾಂಸರು ಅಧ್ಯಯನ ಮಾಡುತ್ತಿದ್ದಾರೆ. ಅದರಲ್ಲಿ ಬುಡಕಟ್ಟು ಮತ್ತು ಗ್ರಾಮಗಳ ಅಧ್ಯಯನವೂ ಸೇರಿಕೊಂಡಿದೆ. ಇಂಥ ಅಧ್ಯಯನಗಳಿಂದಲೇ ನಮಗೆ ಜಾನಪದವೆಂದರೆ ಅಲ್ಲಿ ಸಮಾಜಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ ಮತ್ತು ಮನಃಶಾಸ್ತ್ರದ ಅಂಶಗಳೂ ಮಿಳಿತವಾಗಿವೆ ಎಂದು ಗೊತ್ತಾವುದು. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ ಮಾಡುವುದಕ್ಕಿಂತ ಮೊದಲು ಭಾರತೀಯ ಜಾನಪದ ಅಕಾಡೆಮಿ ಮಾಡಬೇಕಿತ್ತು. ಆದರೆ ಕರ್ನಾಟಕ ಸರ್ಕಾರ ಎರಡು ದಶಕಗಳ ಹಿಂದೆಯೇ ಜಾನಪದ ಅಕಾಡೆಮಿ ಮಾಡಿದ್ದು ಮಾತ್ರ ಯಾರೂ ಮೆಚ್ಚಬೇಕಾದ ಅಂಶ. ಅದು ಈ ವರೆಗೆ ಮಾಡಿದ, ಮಾಡುತ್ತಿರುವ ಕೆಲಸವೂ ಗಣನೀಯವಾದುದು. ಜಾನಪದ ವಿಶ್ವವಿದ್ಯಾಲಯ ಇತ್ತೀಚೆಗೆ ಆರಂಭವಾಗಿದೆ. ಅದು ಮುಂದೇನು ಮಾಡುತ್ತದೆಂದು ನೋಡಬೇಕಷ್ಟೆ. ಕರ್ನಾಟಕದಲ್ಲಿ ಎಷ್ಟೇ ತಡವಾಗಿ ಜಾನಪದದ ಕೆಲಸ ಆರಂಭವಾದರೂ ಈ ಐವತ್ತು ವರ್ಷಗಳಲ್ಲಿ ಆ ಪ್ರಕಾರದಲ್ಲಿ ವ್ಯಾಪಕ ಅಧ್ಯಯನವೇ ನಡೆದಿದೆ. ಆದರೆ ಇತ್ತೀಚೆಗೆ ಕನ್ನಡ ಅಥವಾ ಜಾನಪದ ವಿಷಯಕ್ಕೆ ವಿಶ್ವವಿದ್ಯಾಲಯದ ಮಾನ್ಯತೆ ಬಂದು ಅದನ್ನು ಓದಿದರೆ ಉದ್ಯೋಗ ಸಿಗುವುದಿಲ್ಲ ಎಂಬಂತಾಗಿಬಿಟ್ಟಿದೆ. ಈ ಮಾತು ಎಲ್ಲ ಮಾನವಿಕ ಮತ್ತು ವಿಜ್ಞಾನ ವಿಷಯಗಳಿಗೂ ಅನ್ವಯಿಸುತ್ತದೆ. ಸಾಹಿತ್ಯ ಮತ್ತು ಜನಪದ ಕಲೆಯ ಆಸಕ್ತಿಗೂ ಉದ್ಯೋಗಕ್ಕೂ ಸಂಬಂಧ ತಂದದ್ದು, ವಿದ್ಯಾರ್ಥಿಗಳ ನಡುವೆ ಅದರ ಆಸಕ್ತಿಗೆ ಹಿನ್ನಡೆಯುಂಟಾದಂತೆ ಆಗಿದೆ. ಯಾವುದನ್ನೇ ಓದಲಿ, ಉದ್ಯೋಗ ಪಡೆಯಲಿ ಅವರೆಲ್ಲರ ಅಂತರಂಗದಲ್ಲಿ ನಾಡು ನುಡಿಯ ಬಗ್ಗೆ ಪ್ರೀತಿ ಗೌರವ ಇರಬೇಕಾದದ್ದು ತುಂಬಾ ಅಗತ್ಯ ಎನಿಸುತ್ತದೆ.

- **ಜಾನಪದವನ್ನು ಕೇಂದ್ರ, ರಾಜ್ಯ ಸರ್ಕಾರಗಳ ನೆರವಿನಿಂದ ತಲುಪಿಸುವುದನ್ನು ಒಂದು ಚಳವಳಿಯಂತೆ ರೂಪುಗೊಳ್ಳಬೇಕೆ? ಜಾನಪದ ಅಧ್ಯಯನದ ಸ್ಥಿತಿಗತಿಗಳು ಇದಕ್ಕೆ ಪೂರಕವಾಗಿವೆಯೇ? ಪಠ್ಯದ ಭಾಗವಾಗಿ ಜಾನಪದಕ್ಕೆ ಸರಿಯಾದ ಸ್ಥಾನ ಸಿಕ್ಕಿಲ್ಲವೆನಿಸುತ್ತದೆ.**

ಕೇಂದ್ರ ಸರ್ಕಾರ ಭಾರತದ ಜೀವನಾಡಿಯಾದ ಜಾನಪದವನ್ನು ಗಣರಾಜ್ಯೋತ್ಸವದ ದಿನ ಮೆರವಣಿಗೆಗೆ ಮಾತ್ರ ಎಂಬಂತೆ ಬಳಸಿಕೊಳ್ಳುತ್ತಿದೆ. ಅದರ ಉಳಿವು, ಬೆಳವಣಿಗೆಗೆ ಏನೂ ಮಾಡಿದಂತೆ ತೋರುವುದಿಲ್ಲ. ಬೇರೆ ರಾಜ್ಯಗಳಲ್ಲೂ ಜಾನಪದ ಅಧ್ಯಯನಕ್ಕೆ, ಉದ್ಧಾರಕ್ಕೆ ಪೂರಕ ಪ್ರೋತ್ಸಾಹವಿದ್ದಂತಿಲ್ಲ. ಇದರಿಂದ ಜಾನಪದವು ಅನ್ಯ ಪ್ರಾಂತ್ಯದ ಶಾಲಾ ಕಾಲೇಜುಗಳಲ್ಲಿ ಪಠ್ಯಭಾಗವಾಗುವುದು ದೂರದ ಮಾತು. ಕನ್ನಡದಲ್ಲಿ ಮಾತ್ರ ಜಾನಪದ ತ್ರಿಪದಿಗಳು, ಇನ್ನಿತರ ಹಲಕೆಲವು ಸಂಗತಿಗಳು ಪ್ರೌಢಶಾಲೆ, ಕಾಲೇಜು, ಸ್ನಾತಕೋತ್ತರ ತರಗತಿಗಳಲ್ಲಿ ಸ್ವಲ್ಪಮಟ್ಟಿಗೆ ಪಠ್ಯವಾಗಿಸಿರುವುದು ಕಂಡುಬರುತ್ತದೆ. ಆದರೆ ಅದರ ಸಮಗ್ರ ಸತ್ವ ಮತ್ತು ಜೀವಂತಿಕೆಯನ್ನು ಕುರಿತು ವಿದ್ಯಾರ್ಥಿಗಳಿಗೆ ಬೋಧಕರು ಮನನ ಮಾಡಿಸಬೇಕಾದ ಅಗತ್ಯವಿದೆ. ಬೋಧಕರಿಗೂ ಅದರ ಸತ್ವ ಮೊದಲು ಅರ್ಥವಾಗಬೇಕಾಗಿದೆ. ಅಷ್ಟೇ ಅಲ್ಲ, ಜನಪದ ಹಾಡುಗಾರಿಕೆ, ತತ್ಸಂಬಂಧದ ಕಲೆ ಇವೆಲ್ಲವನ್ನೂ ಶ್ರವ್ಯ ಮತ್ತು ದೃಶ್ಯದ ಮೂಲಕ ತೋರಿಸಿದರೆ ವಿದ್ಯಾರ್ಥಿಗಳಲ್ಲಿ ಆ ಬಗೆಯ ಆಸಕ್ತಿ ಮೂಡಬಹುದು. ಯಾವುದೇ ವಿಷಯವನ್ನು ಓದುವ ವಿದ್ಯಾರ್ಥಿಗಳಿಗೂ